International Journal of Kannada Research
www.kannadajournal.com

**ISSN: 2454–5813**
IJKR 2024; 10(2): 40-45
© 2024 IJKR
www.kannadajournal.com
Received: 24-02-2024
Accepted: 29-03-2024

**ಮಧುರ.ಡಿ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ನಾಗಾರ್ಜುನ ಪದವಿ
ಕಾಲೇಜು, ಯಲಹಂಕ,
ಬೆಂಗಳೂರು, ಭಾರತ

**Corresponding Author:**
**ಮಧುರ.ಡಿ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ನಾಗಾರ್ಜುನ ಪದವಿ
ಕಾಲೇಜು, ಯಲಹಂಕ,
ಬೆಂಗಳೂರು, ಭಾರತ

# ನಾಟಕೀಯ ತಿರುವುಗಳು-ಮೂಕಜ್ಜಿಯ ಕನಸುಗಳು

**ಮಧುರ.ಡಿ**

ಡಾ.ಕೆ.ಶಿವರಾಮ ಕಾರಂತರು ಬರೆದ "ಮೂಕಜ್ಜಿಯ ಕನಸುಗಳು" ಕಾದಂಬರಿಯು ಜ್ಞಾನಪೀಠ ಪುರಸ್ಕೃತ ಕಾದಂಬರಿಯಾಗಿದ್ದು, ಈ ಕಾದಂಬರಿಯನ್ನು ಅನೇಕ ವಿದ್ವಾಂಸರು, ಸಂಶೋಧನಾಸಕ್ತರು ವಿಭಿನ್ನ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕಾರಂತರು ಮೂಲತಃ ಯಕ್ಷಗಾನದ ಕಲಾ ಪ್ರವರ್ತಕರೂ ಆಗಿದ್ದರಿಂದ ತಮ್ಮ ಕಾದಂಬರಿಯಲ್ಲಿ ನಾಟಕೀಯ ಅಂಶಗಳನ್ನು ಮೇಳೈಸಿಕೊಂಡಿರುವುದನ್ನು ಗಮನಿಸಬಹುದು. ಕೃತಿಯು ಕಾದಂಬರಿ ಪ್ರಕಾರದ್ದಾದರೂ; ನಾಟಕೀಯ ತಿರುವುಗಳನ್ನು ಅಂತರ್ಗತಗೊಳಿಸಿಕೊಂಡಿದೆ.

ಮೂಕಜ್ಜಿ, ಸುಬ್ಬರಾಯ, ಸೀತೆ, ಜನ್ನ, ನಾರಾಯಣ, ನಾಗಿ, ರಾಮಣ್ಣ, ಅನಂತರಾಯ, ಮಂಜುನಾಥ, -ಕಾದಂಬರಿಯ ಪ್ರಮುಖ ಪಾತ್ರಗಳು. ಇವರೊಂದಿಗೆ ಕಾಲಾತೀತವಾದ ಘಟನೆ, ಸಂದರ್ಭಗಳ ದೃಷ್ಟಿಯನ್ನು ಮೂಕಜ್ಜಿಯ ಮೂಲಕ ಕಾಣುತ್ತಾ ಹೋಗಬಹುದು. ಊರ ಜನರ ಬಾಯಲ್ಲಿ ಮೂಕಜ್ಜಿಯ ತಲೆ ಸಮವಿಲ್ಲ ಎಂಬ ಅಭಿಪ್ರಾಯವಿದ್ದರೂ ಮೊಮ್ಮಗ ಸುಬ್ಬರಾಯನ ಪಾಲಿಗಂತೂ ತನ್ನ ಅಜ್ಜಿ ಭೂತ, ವರ್ತಮಾನ ಹಾಗೂ ಭವಿಷ್ಯದ ಅದ್ಭುತ, ಸೂಕ್ಷ್ಮ ವಿಷಯಗಳ ಖನಿಜ.

"ಕಥೆಗಳನ್ನು ಕೇಳುವುದೆಂದರೆ ಪ್ರತಿಯೊಬ್ಬರಿಗೂ ಇಷ್ಟವೇ. ಅದನ್ನು ಓದುವುದರಲ್ಲಿ ಅನೇಕ ವಿದ್ಯಾವಂತರು ಸಮಯ ಕಳೆಯುತ್ತಾರೆ. ಓದುತ್ತಿದ್ದಷ್ಟು ಕಾಲ, ಆಮೇಲೆ ನೆನಪು ಉಳಿದಷ್ಟು ಸಮಯ,- ಆ ಕಥೆಯ ಪಾತ್ರಗಳು, ಘಟನೆಗಳು, ಆಶ್ಚರ್ಯಗಳು ನಮ್ಮ ತಲೆಯಲ್ಲಿ ಸುಳಿಯುತ್ತಲೇ ಇರುತ್ತವೆ"- ಹೀಗೆ ಕಥಾ ಪ್ರಪಂಚದ ತನ್ಮಯತೆಯ ಪ್ರಭಾವಗಳನ್ನು ವಿವರಿಸುವುದರೊಂದಿಗೆ ಕಾದಂಬರಿ ಆರಂಭವಾಗುತ್ತದೆ. ಅಂದರೆ ಕಾರಂತರ ಕಾದಂಬರಿಯ ಆರಂಭದಲ್ಲೇ ನಾಟಕದ ಪ್ರಭಾವಗಳನ್ನು ಬಿತ್ತರಿಸುವ ಅಂಶಗಳನ್ನು ಗಮನಿಸಬಹುದು. ನೀರಿನಲ್ಲಿ ಹೆಚ್ಚು ಹೊತ್ತು ಇದ್ದು ಹೊರಗೆ ಬಂದಾಗ ಹೇಗೆ ನೀರಿನಲ್ಲೇ ತೇಲುತ್ತಿರುವಂತೆ ಭಾಸವಾಗುತ್ತದೋ ಹಾಗೆಯೇ ಸುಬ್ಬರಾಯ ಮೂಕಜ್ಜಿಯ ಮೂಲಕ ಕೇಳುವ ಕಥೆಗಳನ್ನು ತನ್ನ ಮನೋರಂಗದಲ್ಲಿ ಕಲ್ಪಿಸಿಕೊಳ್ಳುತ್ತಾ ಹೋಗುತ್ತಾನೆ. ಆದರೆ ಮೂಕಜ್ಜಿಯ ಅನುಭವದ ಸಾಂದ್ರತೆಯ ಕಾರಣ ಆಕೆ ಹೇಳುವ ಸಂಗತಿಗಳೆಲ್ಲಾ ವಾಸ್ತವ ದೃಶ್ಯಗಳಾಗಿ ಪರಿಣಮಿಸುತ್ತಾ ಹೋಗುತ್ತವೆ. ಕಾದಂಬರಿಯ ಈ ಓಟವೇ ನಾಟಕದ ಲೇಪನವನ್ನು ಕೊಡುತ್ತಾ ಹೋಗುವುದು.

ರಾಮಣ್ಣ ಹಾಗೂ ನಾಗಿಯ ದಾಂಪತ್ಯ ದುರಂತವಾದರೂ, ತಾನು ಎಂಜಲಾದ್ದರಿಂದ ಗಂಡನನ್ನು ಸೇರಬಾರದ್ದೆಂಬ ಆಕೆಯ ನಿಲುವು; ಅಂತೆಯೇ ರಾಮಣ್ಣನ ಚಿರಂತನ ಪ್ರೇಮ. ಜನ್ನನ ವ್ಯಕ್ತಿತ್ವದಲ್ಲಿನ ಗೋಸುಂಬಿತನ. ಘಟ್ಟದ ಬರೆಯ ಅವಶೇಷಗಳ ಹಿಂದಿನ ಕಥೆ, ಹಿಂಡಗಾನಿನ ಅಮ್ಮನ ಜಾತ್ರಾ ಮಹೋತ್ಸವದಲ್ಲಿ ಮೂಕಿಯ ವಿಚಿತ್ರ ವರ್ತನೆ, ತಿಪ್ಪಜ್ಜಿಯ ಸಾವಿನ ಮುನ್ಸೂಚನೆ - ಹೀಗೆ ಅನೇಕ ನಾಟಕೀಯ ತಿರುವಗಳ ಆಗರವೇ ಕಾದಂಬರಿಯಲ್ಲಿದೆ.

**ಪ್ರಮುಖ ಪದಗಳು:** ನಾಟಕೀಯ ಹಿನ್ನೆಲೆ, ರೋಚಕ ತಿರುವುಗಳು' ಸೂಕ್ಷ್ಮಗ್ರಾಹಿತ್ವ, ಪರಂಪರಾಗತ ನಿಲುವು, ಪ್ರಗತಿಪರ ಧೋರಣೆ, ಸೃಷ್ಟಿಯ ವಿಸ್ಮಯತೆ

**ಪೀಠಿಕೆ**

ಪೀಳಿಗೆಗಳ ಘರ್ಷಣೆ ಹಾಗೂ ಮುಖಾಮುಖಿಯನ್ನು ಮಾಡಿಸುತ್ತಾ ಅಮೂರ್ತ ವಿಚಾರಗಳೆನಿಸುವಂತೆ ಕಂಡರೂ ಬದುಕಿನ ಸೂಕ್ಷ್ಮ ಗ್ರಾಹಿತ್ವದ ಸಂಕೇತವಾಗಿ ಡಾ.ಕೆ.ಶಿವರಾಮ ಕಾರಂತರು 1968 ರಲ್ಲಿ "ಮೂಕಜ್ಜಿಯ ಕನಸುಗಳು" ಎಂಬ ಕಾದಂಬರಿಯನ್ನು ಬರೆದರು. ಈ ಕಾದಂಬರಿಗಾಗಿ ಶಿವರಾಮ ಕಾರಂತರಿಗೆ 1977 ರಲ್ಲಿ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಕಡಲತೀರದ ಭಾರ್ಗವ ಎಂದೇ ಪ್ರಸಿದ್ದೀ ಪಡೆದಿರುವ ಶಿವರಾಮ ಕಾರಂತರು ಜನಮಾನಸದ ಸೂಕ್ಷ್ಮ ಸಂಗತಿಗಳತ್ತ ಒಲವು ತೋರಿಸಿರುವುದನ್ನು ಅವರ ಕೃತಿಗಳ ಮೂಲಕ ಕಾಣಬಹುದು. ಈ ಗ್ರಹಿಕೆಗೆ ಮೂಕಜ್ಜಿಯಂತೆ ಹೊರಗಣ್ಣಿನ ಜೊತೆಗೆ ಒಳಗಣ್ಣಿನ ಅವಶ್ಯಕತೆಯೂ ಇದೆ.

ಶಿವರಾಮ ಕಾರಂತರು ಯಾವುದೇ ವಾದಕ್ಕೂ ಬದ್ಧರಾಗಿ ಬರೆದಿಲ್ಲ. ಅವರ ಬದ್ಧತೆಯ ಮಾನದಂಡ ಬದುಕು ಹಾಗೂ ಅನುಭವ. "ಸಾಹಿತ್ಯಕ್ಕೆ ಅನುಭವವೇ ಜನ್ಮಭೂಮಿ. ಅದನ್ನು ಬಿಟ್ಟರೆ ಬೇರೆ ಬೆಳೆಯಲಾರದು; ಬೆಳೆದರೆ ಕೃತಕವಾಗುತ್ತದೆ; ಅಸತ್ಯವಾಗುತ್ತದೆ, ಸಾಹಿತ್ಯ ಮತ್ತು ಬದುಕು ಹತ್ತಿರ, ಅವು ಅವಳಿ ಜವಳಿ."[೧] ಎಂದು ನಂಬುವಲ್ಲಿ ತಮ್ಮ ದೈನಂದಿನ ಅನುಭವಗಳಿಗೆ ಬದುಕನ್ನೇ ಕೇಂದ್ರಶಕ್ತಿಯಾಗಿ ಪರಿಭಾವಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಾನವನ ಬದುಕು ಭೂತ, ವರ್ತಮಾನ ಹಾಗೂ ಭವಿಷ್ಯದ ಸಂಗತಿಗಳನ್ನು ಒಳಗೊಂಡಿರುವುದರಿಂದ ನಮ್ಮ ಹಿರಿಯರಲ್ಲಿ ಅಪಾರವಾದ ಅನುಭವ ಆಧಾರಿತ ಅಪಾರ ಜ್ಞಾನ ಸಂಪತ್ತು ಕಿರಿಯರ ವರ್ತಮಾನ ಹಾಗೂ ಭವಿಷ್ಯದ ನಡಾವಳಿಗಳಿಗೆ ದಾರಿದೀಪವಾಗಬಲ್ಲದು. ಆದರೆ ವಿದ್ಯಾವಂತ, ಆಧುನಿಕ ಪೀಳಿಗೆ ಹಿಂದಿನವರ ಜ್ಞಾನ ಸಂಪತ್ತನ್ನು ಸಂಶಯಾಸ್ಪದವಾಗಿ ಕಾಣುವುದರಿಂದ ಅವರಿಗೆ ಬದುಕಿನ ದರ್ಶನವಾಗದಿರುವ ಸ್ಥಿತಿಗೆ ಒದಗುತ್ತದೆ.

**ಶಿವರಾಮ ಕಾರಂತ; ಮೊಳೆಯಾರವಿ.ಬಿ.(ಸಂ): ಕಾರಂತ ಚಿಂತನ, ಪುಟ-29(1991)**

ಕಾದಂಬರಿಯ ಕಥೆಯು ಮೂಡೂರು ಎಂಬ ಹಳ್ಳಿಯಲ್ಲಿ ನಡೆಯುವಂಥದ್ದು. 'ಮೂಡೂರು' - ಈ ಹೆಸರೇ ಬಹಳ ಅರ್ಥಗರ್ಭಿತವಾದದ್ದು. ಈ ಮೂಡೂರಿಗೆ ಮೂರೂರು ಎಂಬ ಹೆಸರಿತ್ತಂತೆ. ಇದರ ಆಚೀಚೆ ಮೂರು ಕಾಡು ಮತ್ತು ಹಾಡಿಗಳ ಸೆರಗುಗಳಿವೆ. ಕ್ರಮೇಣ ಜನರ ಬಾಯಿ ತೊದಲಿ ಮೂರೂರು - ಮೂಡೂರು ಆಯಿತಂತೆ.ಮೂಡೂರಿನ ಆಚೆನಲ್ಲಿ ಬಸರಿ ಕಟ್ಟೆ, ನಡೂರಿನಲ್ಲಿ ಅಶ್ವತ್ಥ ಕಟ್ಟೆ, ಪಡುವಣದಲ್ಲಿ ಬೂದಿಕಟ್ಟೆಯಂತೆ. ಈ ಊರುಗಳೆಲ್ಲಾ ಮನುಷ್ಯನ ಹುಟ್ಟು, ಬದುಕು, ಸಾವುಗಳನ್ನೇ ಸಂಕೇತಿಸುವಂಥವು ಎಂಬುದು ವಿಶೇಷ. ಹಾಗೆಯೇ ಮನುಷ್ಯನ ಜೀವನ ಭೂತ, ವರ್ತಮಾನ ಹಾಗೂ ಭವಿಷ್ಯದ ವಿಚಾರಗಳಲ್ಲಿ ಮುಳುಗಿರುವುದನ್ನು ಕಾದಂಬರಿ ಸೂಚಿಸುತ್ತದೆ. ಇಡೀ ಕಾದಂಬರಿಯಲ್ಲಿ ಮೂಕಜ್ಜಿ ಸದಾ ಕಾಲ ಕಳೆಯುವ ಅಶ್ವತ್ಥ ಕಟ್ಟೆ ಬದುಕು ಹುಟ್ಟು ಸಾವುಗಳ ಆಚೆಗೂ ಚಾಚಿಕೊಂಡಿರುವ ಚಿರಂತನತೆಯನ್ನು ಧ್ವನಿಸುತ್ತದೆ.

ವಾಸ್ತವಿಕ ಕಥೆಯ ಪರಿಣಾಮ ತೀವ್ರತೆಯೆಂದರೆ ಕಥೆಯಲ್ಲಿನ ಯಾವುದಾದರೂ ಪಾತ್ರಗಳು ಹಾಗೂ ಸನ್ನಿವೇಶಗಳು ನಮ್ಮ ನಿಜ ಜೀವನಕ್ಕೆ ತಾಳೆಯಾಗುತ್ತದೆ. ಆದ್ದರಿಂದಲೇ ಮೂಕಜ್ಜಿಯ ಮೊಮ್ಮಗ ಸುಬ್ರಾಯ ತನ್ನ ಅಜ್ಜಿಯಿಂದ ಕೇಳುವ ಎಲ್ಲಾ ಕಥೆಗಳನ್ನು ಪ್ರತ್ಯಕ್ಷವಾಗಿ ತನ್ನ ಬದುಕಿನ ಒಂದಲ್ಲಾ ಒಂದು ಸಂದರ್ಭಕ್ಕೆ ಹೊಂದಿಸಿಕೊಳ್ಳುತ್ತಾನೆ. ಮೂಡೂರಿನ ಜನರ ಬಾಯಲ್ಲಿ ಮೂಕಜ್ಜಿಯ ತಲೆ ಸಮವಿಲ್ಲ, ಬಾಯಿ ಹರಕು ಹೀಗೆ ಅನೇಕ

ಅಭಿಪ್ರಾಯವಿದ್ದರೂ ಮೊಮ್ಮಗ ಸುಬ್ಬರಾಯನ ಪಾಲಿಗಂತೂ ತನ್ನ ಅಜ್ಜಿ ಭೂತ, ವರ್ತಮಾನ ಹಾಗೂ ಭವಿಷ್ಯದ ಅದ್ಭುತ, ಸೂಕ್ಷ್ಮ ವಿಷಯಗಳ ಖನಿಜ.

ಸುಬ್ಬರಾಯನಿಗೆ ಕಥೆ ಕಾದಂಬರಿಗಳಿಗಿಂತ ತನ್ನ ಅಜ್ಜಿ ಹೇಳುವ ಕಥೆಗಳೇ ರುಚಿಸುತ್ತವೆ. ಅವು ವಾಸ್ತವಕ್ಕೆ ಹತ್ತಿರವಿರುವುದೇ ಮುಖ್ಯ ಕಾರಣ. ಆರಂಭದಲ್ಲಿ ಕಥೆ ಎನಿಸಿದರೂ ಕ್ರಮೇಣ ಅದೇ ಘಟನೆಗಳ ದರ್ಶನವಾದಾಗ ಸುಬ್ರಾಯನಿಗೆ ತನ್ನ ಅಜ್ಜಿಯ ಮಾತುಗಳ ಅರ್ಥ ಗೋಚರಿಸುತ್ತಾ ಹೋಗುತ್ತದೆ. ಸೀತೆ, ಕಿಟ್ಟು, ಚಂದ್ರ, ಜನ್ನ, ನಾರಾಯಣ, ನಾಗಿ, ರಾಮಣ್ಣ, ಅನಂತರಾಯ, ಮಂಜುನಾಥ, - ಕಾದಂಬರಿಯ ಪ್ರಮುಖ ಪಾತ್ರಗಳಾದರೂ ಇಡೀ ಕಥೆ ಮೂಕಜ್ಜಿ ಹಾಗೂ ಸುಬ್ರಾಯನ ಸುತ್ತಲೇ ಹೆಣೆಯಲ್ಪಟ್ಟಿದೆ.

**ಉದ್ದೇಶ- ವ್ಯಾಪ್ತಿ**

"ಕಥೆಗಳನ್ನು ಕೇಳುವುದೆಂದರೆ ಪ್ರತಿಯೊಬ್ಬರಿಗೂ ಇಷ್ಟವೇ. ಅದನ್ನು ಓದುವುದರಲ್ಲಿ ಅನೇಕ ವಿದ್ಯಾವಂತರು ಸಮಯ ಕಳೆಯುತ್ತಾರೆ. ಓದುತ್ತಿದ್ದಷ್ಟು ಕಾಲ, ಆಮೇಲೆ ನೆನಪು ಉಳಿದಷ್ಟು ಸಮಯ,- ಆ ಕಥೆಯ ಪಾತ್ರಗಳು, ಘಟನೆಗಳು, ಆಶ್ಚರ್ಯಗಳು ನಮ್ಮ ತಲೆಯಲ್ಲಿ ಸುಳಿಯುತ್ತಲೇ ಇರುತ್ತವೆ"[2]- ಹೀಗೆ ಕಥಾ ಪ್ರಪಂಚದ ತನ್ಮಯತೆಯ ಪ್ರಬಾವಗಳನ್ನು ವಿವರಿಸುವುದರೊಂದಿಗೆ ಕಾದಂಬರಿ ಆರಂಭವಾಗುತ್ತದೆ. ಅಂದರೆ ಕಾರಂತರ ಕಾದಂಬರಿಯ ಆರಂಭದಲ್ಲೇ ನಾಟಕದ ಪ್ರಬಾವಗಳನ್ನು ಬಿತ್ತರಿಸುವ ಅಂಶಗಳನ್ನು ಗಮನಿಸಬಹುದು. ನೀರಿನಲ್ಲಿ ಹೆಚ್ಚು ಹೊತ್ತು ಇದ್ದು ಹೊರಗೆ ಬಂದಾಗ ಹೇಗೆ ನೀರಿನಲ್ಲೇ ತೇಲುತ್ತಿರುವಂತೆ ಭಾಸವಾಗುತ್ತದೋ ಹಾಗೆಯೇ ಸುಬ್ಬರಾಯ ಮೂಕಜ್ಜಿಯ ಮೂಲಕ ಕೇಳುವ ಕಥೆಗಳನ್ನು ತನ್ನ ಮನೋರಂಗದಲ್ಲಿ ಕಲ್ಪಿಸಿಕೊಳ್ಳುತ್ತಾ ಹೋಗುತ್ತಾನೆ. ಆದರೆ ಮೂಕಜ್ಜಿಯ ಅನುಭವದ ಸಾಂದ್ರತೆಯ ಕಾರಣ ಆಕೆ ಹೇಳುವ ಸಂಗತಿಗಳೆಲ್ಲಾ ವಾಸ್ತವ ದೃಶ್ಯಗಳಾಗಿ ಪರಿಣಮಿಸುತ್ತಾ ಹೋಗುತ್ತವೆ. ಕಾದಂಬರಿಯ ಈ ಓಟವೇ ನಾಟಕದ ಲೇಪನವನ್ನು ಕೊಡುತ್ತಾ ಹೋಗುವುದು.

"ಮೂಕಜ್ಜಿಯ ಕನಸುಗಳು" ಕಾದಂಬರಿಯನ್ನು ಅನೇಕ ವಿದ್ವಾಂಸರು, ಸಂಶೋಧನಾಸಕ್ತರು ವಿಭಿನ್ನ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕಾರಂತರು ಮೂಲತಃ ಯಕ್ಷಗಾನದ ಕಲಾ ಪ್ರವರ್ತಕರೂ ಆಗಿದ್ದರಿಂದ ತಮ್ಮ ಕಾದಂಬರಿಯಲ್ಲಿ ನಾಟಕೀಯ ಅಂಶಗಳನ್ನು ಮೇಳೈಸಿಕೊಂಡಿರುವುದನ್ನು ಗಮನಿಸಬಹುದು. ಕೃತಿಯು ಕಾದಂಬರಿ ಪ್ರಕಾರದ್ದಾದರೂ; ನಾಟಕೀಯ ತಿರುವುಗಳನ್ನು ಅಂತರ್ಗತಗೊಳಿಸಿಕೊಂಡಿದೆ.

**ಮೂಕಜ್ಜಿಯ ಕನಸುಗಳು: ಡಾ.ಕೆ.ಶಿವರಾಮ ಕಾರಂತ ಪುಟ 1 (52ನೇ ಮುದ್ರಣ 2023)**

**ವಿಷಯದ ಚರ್ಚೆ**

ಯಾವುದೇ ಕಥೆ ಓದುಗನಿಗಾಗಲೀ, ಕೇಳುಗನಿಗಾಗಲೀ ಇಡಿಸುವುದು ಆ ಕಥೆಯಲ್ಲಿ ಕೆಲವು ರೋಚಕ ಸನ್ನಿವೇಶಗಳು ಇದ್ದಾಗ; ವಾಸ್ತವವನ್ನು ಮೀರಿದ ಕೆಲವು ಭ್ರಮಾತ್ಮಕ ಸಂಗತಿಗಳು ಇದ್ದಾಗ; ಕಥೆ ಕಣ್ಣಿಗೆ ಕಟ್ಟುವಂತೆ ಬಿತ್ತರಿಸಲ್ಪಟ್ಟಾಗ; ಹಾಗೆಯೇ ಕೇಳಿದ, ಓದಿದ ಕಥೆಗಳು ವಾಸ್ತವದಲ್ಲಿ ನಡೆದೇ ಬಿಟ್ಟರೆ ಮುಂದೆ ಅಂತಹ ಕಥೆಗಳನ್ನು ಕೇಳುವಲ್ಲಿ ಕುತೂಹಲ ಹೆಚ್ಚಾಗುತ್ತದೆ. ಒಂದರ್ಥದಲ್ಲಿ ಹೇಗೆ ಓದು ಪಠ್ಯವೊಂದು ರಂಗ ಪಠ್ಯವಾಗಿ ವೇದಿಕೆಯ ಮೇಲೆ ದೃಶ್ಯ ರೂಪವನ್ನು ಕಟ್ಟಿಕೊಡುತ್ತದೆಯೋ ಹಾಗೆಯೇ ಡಾ.ಕೆ.ಶಿವರಾಮ ಕಾರಂತರ "ಮೂಕಜ್ಜಿಯ ಕನಸುಗಳು" ನಾಟಕೀಯ ಸನ್ನಿವೇಶಗಳನ್ನು ಓದುಗನಿಗೆ ಕಟ್ಟಿಕೊಡುತ್ತದೆ.

ಕಾದಂಬರಿಯು ನಾಟಕದಂತೆ ಒಂದೊಂದೇ ದೃಶ್ಯವನ್ನು ಅನಾವರಣಗೊಳಿಸುತ್ತಾ ಹೋಗುತ್ತದೆ. ಮೊದಲಿಗೆ ರಾಮಣ್ಣ ಹಾಗೂ ನಾಗಿಯ ದಾಂಪತ್ಯದ ದುರಂತ. ಇವರ ಕಥೆಯ ಹಿಂದಿನ ಎಲ್ಲಾ ಮಜಲುಗಳು ತೆರೆದುಕೊಳ್ಳುತ್ತಾ ಹೋಗುತ್ತದೆ. ಇವರ ಕಥೆಗೆ ಮೂಕಜ್ಜಿ ಪ್ರತ್ಯಕ್ಷ ಸಾಕ್ಷಿಯಾದರೂ ತನ್ನ ಮೊಮ್ಮಗನಿಗೆ ನಡೆದ ಸಂಗತಿಯನ್ನು ಕುತೂಹಲಭರಿತವಾಗಿ ತಿಳಿಸಿ, ಕೊನೆಗೆ ನಾಗಿಯ ಬದುಕಿನ ಅವಘಡದಲ್ಲಿ ಸುಬ್ರಾಯನ ಸೋದರಮಾವ ಶೀನಪ್ಪನ ಕೈವಾಡವಿದ್ದುದರ ಬಗ್ಗೆ ತಿಳಿಸಿದಾಗಲಂತೂ ಸುಬ್ರಾಯನಿಗೆ ನಾಗಿ, ರಾಮಣ್ಣನ ಕಥೆ-ವ್ಯಥೆ ಹತ್ತಿರವಾಗುತ್ತದೆ.

ನಾಟಕವು ಬದುಕಿನ ಪ್ರತಿಬಿಂಬ ಎಂದು ಹೇಳುತ್ತಾರೆ. ಅಂತೆಯೇ ನಮ್ಮ ನಿಮ್ಮ ಮಧ್ಯೆ ಅನೇಕರು ನೇರ ನಡೆ ನುಡಿಯವರು ಇರುವುದು ಸಹಜ. ಅವರ ಮಾತುಗಳು ಆ ಕ್ಷಣಕ್ಕೆ ಕಹಿ ಎನಿಸಿದರೂ ಮುಂದೆ ಅವರ ಮಾತು ಸತ್ಯವಾಗುತ್ತದೆ. ಇಂತಹ ಜನರ ಸ್ವಭಾವದಂತೆ ಕಾದಂಬರಿಯಲ್ಲೂ ನಮ್ಮ ಮೂಕಜ್ಜಿ ಕಾಣಿಸುತ್ತಾಳೆ. ಸುಬ್ರಾಯನ ಸ್ನೇಹಿತ ಜನ್ನನ ದುರ್ನಡತೆಯ ಬಗ್ಗೆ ಅವನ ಮುಖಕ್ಕೇ ಮೂಕಜ್ಜಿ ಹೇಳಿಬಿಡುತ್ತಾಳೆ. ಸುಬ್ರಾಯನಿಗೆ ಈ

ವಿಷಯ ಇರಿಸುಮುರಿಸು ಉಂಡುಮಾಡಿದರೂ ಮುಂದೆ ಮೈಸೂರಿನಲ್ಲಿ ಹೋಟೆಲ್ ನಡೆಸುತ್ತಿರುವ ಹಿಂಡುಗಾನ ಮಂಜುನಾಥನ ಮೂಲಕ ಜನಾರ್ಧನನ ಕಚ್ಚೆಹರುಕ ಬುದ್ಧಿ ಹಾಗೂ ಹೆಣ್ಣು ಹೆತ್ತವರನ್ನು ಆತ ಪೀಡಿಸುತ್ತಿದ್ದುದರ ಬಗ್ಗೆ ತಿಳಿಯುತ್ತದೆ.

ಮತ್ತೆ ಮಂಜುನಾಥ ಆಡಂಬರದಿಂದ ಮಾಡಿದ ಹಿಂಡಿಗಾನ ಅಮ್ಮನ ಜಾತ್ರಾ ಮಹೋತ್ಸವವು ಬರೀ ತೋರಿಕೆಗಾಗಿ ಮಾಡಿರುವುದು ಎಂದು ನೇರವಾಗಿ ಹಂಗಿಸಿ ಮೂಕಜ್ಜಿ ಅವನನ್ನು ಅವಮಾನಿಸುತ್ತಾಳೆ. ಆದರೆ ಮಂಜುನಾಥನ ಒಣ ಜಂಭವನ್ನು ಕೆಡವಲೇ ಮೂಕಜ್ಜಿ ಹೀಗೆ ಹೇಳಿದ್ದು ಎಂಬುದರ ಅರಿವು ಸುಬ್ರಾಯನಿಗೆ ನಂತರ ಆಗುತ್ತದೆ.

ಮೂಕಜ್ಜಿ ವಯಸ್ಸಿನಲ್ಲಿ ಹಿರಿಯವಳಾದರೂ ಪಾರಂಪರಿಕ ನಂಬಿಕೆಗಳನ್ನು ಅಲ್ಲಗಳೆಯುವ, ಪ್ರಗತಿಪರ ಹಾಗೂ ವಾಸ್ತವಿಕ ಧೋರಣೆಯ ದೃಷ್ಟಿ ಹೊಂದಿರುವವಳು." ಎಲ್ಲರೂ ಈ ಜಗತ್ತು ದೇವರ ಮಾಯೆ- ಅನ್ನುತ್ತಾರೆ. ನಾನೂ ಅನ್ನುತ್ತೇನೆ- ಗಂಡು ಹೆಣ್ಣಿನ ಮಾಯೆಯಿಂದಲೇ ಜಗತ್ತು. ಅವು ಎರಡೂ ಇಲ್ಲದೆ ಹೋಗಿದ್ದರೆ ಜಗತ್ತೆಂಬುದು ಬರಡು."[3] ಇನ್ನೂ ಮುಂದುವರೆದು ಮೂಕಜ್ಜಿ ಪುರಾಣ ಪುರುಷರ ಅಸಮರ್ಥತೆ ಹಾಗೂ ಅವರ ಮೊರೆ ಹೋಗ ಬಯಸುವ ಭಕ್ತರ ಅರ್ಥಹೀನತೆಯ ಬಗ್ಗೆಯೂ ತನ್ನದೇ ಅಭಿಪ್ರಾಯವುಂಟು. "ಹೆಂಡತಿ ಮಕ್ಕಳನ್ನು ಬಿಟ್ಟರು ದಾಸರು. ವಿಠಲನನ್ನು, ನಾರಾಯಣನನ್ನು ನಂಬಿ ಹಾಡಿದರು. ಅವರು ತಮ್ಮ ಹೆಂಡಿರನ್ನು ದಾರಿ ಮೇಲೆ ಕೆಡೆದು ಹೋದದ್ದು ನಿಜ. ಹಾಗೆ ಮಾಡಿ ಬೇಡಿದ್ದು ಯಾರನ್ನು? ತಂತಮ್ಮ ಹೆಂಡಿರೊಡನೆ ಸುಖವಾಗಿ ವೈಕುಂಠದಲ್ಲೋ, ಕೈಲಾಸದಲ್ಲೋ ಇರುವಂಥ ವಿಷ್ಣುವನ್ನು, ಶಿವನನ್ನು. ಅವರೇನು ಕೊಟ್ಟಾರು? ಅವರಿಗೂ ಅವರ ಹೆಂಡಂದಿರಿಂದ ಮುಕ್ತಿ ಸಿಗದೆ ಇರುವಾಗ?[4]

ನಾಗಿ -ರಾಮಣ್ಣರ ಕಥೆಯ ನಂತರ ಕಾದಂಬರಿಯ ಮುಂದಿನ ನಾಟಕೀಯ ದೃಶ್ಯಗಳು ಕಾಣ ಬರುವುದು ಸುಬ್ರಾಯ ಹಾಗೂ ಜನ್ನ ಘಟ್ಟದ ಬರೆಗೆ ಹೋಗಿ ಅಲ್ಲಿನ ಪ್ರಾಚ್ಯ ವಿಚಾರಗಳ ಸತ್ಯಾಸತ್ಯತೆಯ ಬಗ್ಗೆ ತಿಳಿಯಲು ಹೊರಟಾಗ. ಅವರ ಜೊತೆಗೂಡಿದ್ದು ಕಾಡಿನ ಬಗ್ಗೆ ಅರಿವಿದ್ದ ಕಡುಬಿ ಅಣ್ಣುನಾಯ್ಕ.ಗುಹೆಯ ಬಳಿ ಪ್ರಯಾಸದಿಂದ ಹೋಗಿ ಅಲ್ಲಿಂದ ಬರುವಾಗ ಎಲುಬಿನ ತುಂಡು, ಕವಡೆ, ಕೊಂಬುಗಳನ್ನು ಸುಬ್ರಾಯ ಹೊತ್ತು ತಂದ. ಈ ಪ್ರಾಚ್ಯ ಅವಶೇಷಗಳ ಹಿಂದಿನ ಕಥೆಯನ್ನು ತನ್ನ ಅಜ್ಜಿಯ ಮೂಲಕ ತಿಳಿದುಕೊಳ್ಳುವ ತವಕ ಆತನದ್ದಾಗಿತ್ತು.

**ಮೂಕಜ್ಜಿಯ ಕನಸುಗಳು**

ಡಾ.ಕೆ.ಶಿವರಾಮ ಕಾರಂತ ಪುಟ 34 (52ನೇ ಮುದ್ರಣ 2023)

**ಮೂಕಜ್ಜಿಯ ಕನಸುಗಳು: ಡಾ.ಕೆ.ಶಿವರಾಮ ಕಾರಂತ ಪುಟ 37 (52ನೇ ಮುದ್ರಣ 2023)**

ಮೂಕಜ್ಜಿಯ ಅತೀಂದ್ರೀಯ ಶಕ್ತಿ ನಿಜವಾಗಲೂ ಅಚ್ಚರಿಯಾಗುವಂಥದ್ದು. ಆಕೆಯ ಮಾತಿನಲ್ಲೇ ಹೇಳಬೇಕಾದರೆ -" ಈ ಮನೆಯನ್ನು ಬಿಟ್ಟು ಹೊರಗೆ ಹೋದರೆ ಸಾಕು ಅಥವಾ ಗುರುತು ಇರುವವರು ಯಾರು ಬಂದರೂ ಸಾಕು; ದೇವಸ್ಥನಕ್ಕೆ ಹೋದರೂ ಸರಿಯೆ; ಏನಾದರೂ ಹೊಸತನ್ನು ಮುಟ್ಟಿದರೂ ಸರಿಯೇ, ಒಂದು ಬಾರಿ ನನ್ನ ಮೈ ಜುಮ್ ಆಗುತ್ತದೆ. ಯಾಕೆ ಹಾಗಾಗುತ್ತದೆ- ಎಂದು ಕಣ್ಣು ಮುಚ್ಚಿ ಯೋಚಿಸಿದರೆ ಏನೇನೆಲ್ಲ ಕಾಣಿಸಲಿಕ್ಕೆ ತೊಡಗುತ್ತದೆ. ಹಿಂದೆ ಆದದ್ದೆಲ್ಲ ಕಾಣಿಸಿಕೊಳ್ಳುತ್ತದೆ. ನನಗೆ ಮೈ ಎಚ್ಚರವಿದ್ದರೂ ಇಲ್ಲದ ಹಾಗೆ ಏನೇನೋ ಕಣ್ಮುಂದೆ ಬಂದು ಹಾಯುತ್ತದೆ. ಒಂದು ನಾಟಕದ ಹಾಗೆ ಕಾಣಿಸುತ್ತದೆ. ಹಾಗೆ ಕಾಣಿಸತೊಡಗಿತು ಎಂದರೆ ನನ್ನ ಬಾಯಿ ಗೊಣಗಲಿಕ್ಕೆ ಶುರು ಮಾಡುತ್ತದೆ."[5] ಮೂಕಜ್ಜಿಯು ತನ್ನದೇ ಆದೊಂದು ಕಣ್ಣಿನಿಂದ ಸಂಪ್ರದಾಯದ ಎಲ್ಲೆ ಮೀರಿ, ಸುತ್ತಲಿನ ಜಗತ್ತನ್ನು ಕಾಣುವಂಥವಳು.

ಕಥೆಯ ರೋಚಕತೆ ಮುಂದುವರೆಯುವುದು ಸುಬ್ರಾಯನ ತಮ್ಮ ನಾಣಿ(ನಾರಾಯಣ) ಅನಂತರಾಯರ ಜೊತೆ ಊರಿಗೆ ಬಂದಾಗ. ತಮ್ಮ ಹಿರಿಯರು ಇದ್ದ ಹಗಲೂರನ್ನು ನೋಡಬೇಕೆಂಬ ನೆಪ ಹೂಡಿದರು ಅವರ ತಂಗಿಯರ ಮದುವೆ ಪ್ರಸ್ತಾಪವೇ ಮುಖ್ಯ ಕಾರಣವೆಂದು ನಂತರದಲ್ಲಿ ತಿಳಿಯುತ್ತದೆ. ಅವರ ಆಗಮನವಾದಾಗ ಸೀತೆ ಎಲ್ಲರಿಗೂ ಪಾಯಸ ಬಡಿಸುತ್ತಾಳೆ. ಆಗ ಮಗ ಕಿಟ್ಟಣ್ಣ ತಿನ್ನಲು ಆತುರ ಪಟ್ಟಾಗ ಮೂಕಜ್ಜಿ " ಯಾತಕ್ಕೆ ಅವಸರ ಮಾಡುತ್ತೀ? ಇದರ ಬೆನ್ನಿಗೇ ಹತ್ತಾರು ಪಾಯಸ ಸಿಗುತ್ತದೆ ನಿನಗೆ"[6] ಎಂದು ಹೇಳುತ್ತಾಳೆ. ಅದರ ಒಳಾರ್ಥ ನಂತರ ಸುಬ್ರಾಯ ಅರಿಯುತ್ತಾನೆ. ತನ್ನ ತಮ್ಮ ನಾಣಿ ಅನಂತರಾಯರ ಕಿರಿಯ ತಂಗಿಯನ್ನು ಮದುವೆಯಾಗಲು ಒಪ್ಪಿದುದರ ವಿಷಯ ಖುಷಿ ತಂದರೂ ಹಿರಿಯ ತಂಗಿಯನ್ನು ಜನ್ನ ಹೆಣ್ಣು ನೋಡುವ ಶಾಸ್ತ್ರ ಮಾಡಿ

ಬಂದು ಏನೂ ಉತ್ತರಿಸದಿದ್ದಕ್ಕಾಗಿ ಈಗ ಅನಂತರಾಯರು ವಿಚಾರಿಸಿಕೊಂಡು ಹೋಗಲು ಬಂದಿರುವುದಾಗಿ ಹೇಳುತ್ತಾರೆ. ಆದರೆ ಏನೂ ಪ್ರಯೋಜನವಾಗದೆ ನಾಣಿಯ ಮದುವೆಯ ತಯಾರಿಗಳು ಮಾತ್ರ ಸುಬ್ರಾಯನ ಮುಂದಾಳತ್ವದಲ್ಲಿ ನಡೆಯುತ್ತದೆ.

**ಮೂಕಜ್ಜಿಯ ಕನಸುಗಳು: ಡಾ.ಕೆ.ಶಿವರಾಮ ಕಾರಂತ ಪುಟ 69 (52ನೇ ಮುದ್ರಣ 2023)**

**ಮೂಕಜ್ಜಿಯ ಕನಸುಗಳು: ಡಾ.ಕೆ.ಶಿವರಾಮ ಕಾರಂತ ಪುಟ 87 (52ನೇ ಮುದ್ರಣ 2023)**

ತಮ್ಮನ ಮದುವೆಯ ಓಡಾಟ ಸುಬ್ರಾಯನ ಚಪಲವನ್ನೆಲ್ಲಾ ಮೂಲೆಗುಂಪಾಗಿಸಿತು. ಸುಬ್ರಾಯನಿಗೆ ಗುಹೆ ಸಂಶೋಧಿಸಿ, ಅಜ್ಜಿಯೊಡನೆ ಅನುಸಂಧಾನ ನಡೆಸಿ, ತಾನು ಸಂಗ್ರಹಿಸಿ ತಂದದ್ದನ್ನು ಪ್ರಾಚ್ಯ ಪಂಡಿತರಿಗೆ ತೋರಿಸಿ, ಒಂದೆರಡು ಲೇಖನಗಳನ್ನು ಗೀಚಿ, ತನ್ನ ಹೆಸರಿನಲ್ಲಿ ಅಚ್ಚಾದುದನ್ನು ಕಾಣಬೇಕು ಎಂಬುವ ಆಸೆಯಿತ್ತು.

ದೇವರ ವಿಚಾರದಲ್ಲಿ ಮೂಕಜ್ಜಿಯ ನಿಲುವು ಬಹಳ ವಿಶೇಷ, ಪ್ರಗತಿಪರ, ಪುರೋಗಾಮಿ ವಿರೋಧ ಚಿಂತನವಾಗಿತ್ತು. ಆಕೆಯ ಪ್ರಕಾರ " ಒಬ್ಬನೇ ದೇವರು ಇರುವುದು; ಆದರೂ ವಿಪ್ರರು 'ಬಹುಧಾ ವದಂತಿ' ಎನ್ನುತ್ತಾರೆ. ಅವನೇ ಹುಟ್ಟಿಸಿದಂಥ ಒಂದು ಹುಳುವನ್ನು ಕೊಲ್ಲಲಿಕ್ಕೆ ಒಂದು ಅವತಾರ ಬೇಕೋ? ದೇವರು ಒಬ್ಬನೇ ಸಾವಿರ ಆದದ್ದು ಮನುಷ್ಯರಿಂದ.[7]

ಲೌಕಿಕ ವಿಷಯಗಳಿಂದ ತಾನು ದೂರನೆಂದು ಹೇಳುತ್ತಿದ್ದ ಅನಂತರಾಯನಿಗೆ ಸಂಸಾರದ ಪಾರಮಾರ್ಥವನ್ನು ಮೂಕಜ್ಜಿ ಅವನಿಗೆ ತಿಳಿಸುತ್ತಾಳೆ. "ದೇವರನ್ನು ಪ್ರೀತಿ ಮಾಡುವುದಕ್ಕೆ ಸಂಸಾರ ಬಾಧಕವಿಲ್ಲ. ಸಂಸಾರ ನಡೆಯಿಸಲಿ - ಅಂತಲೇ ಅವನು ಗಂಡು, ಹೆಣ್ಣು ಎಂಬ ಸೃಷ್ಟಿ ಮಾಡಿದ್ದು."[8] ಎಂದು ಮೂಕಜ್ಜಿ ಅನಂತರಾಯನ ಪ್ರಶ್ನೆಗೆ ಉತ್ತರಿಸುತ್ತಾಳೆ. ಸಣ್ಣ ವಯಸ್ಸಿನಲ್ಲೇ ವೈಧವ್ಯ ಪ್ರಾಪ್ತಿಯಾದರೂ ಮೂಕಜ್ಜಿಗೆ ಸಾಂಸಾರಿಕ ಬದುಕಿನ ಬಗ್ಗೆ ವೈರಾಗ್ಯ ಮೂಡಿಲ್ಲ ಬದಲಾಗಿ ಸಾಂಸಾರಿಕ ಸಾಗರದಲ್ಲೇ ಈಸ ಬೇಕಿರುವ ವಿಚಾರವನ್ನು ತನ್ನ ಸೂಕ್ಷ್ಮ ಮತಿಯಿಂದ ಕಂಡುಕೊಂಡಿದ್ದಳು.

ನಾಣಿಯ ಮದುವೆಯ ನಂತರ ಹಿಂಡುಗಾನ ಮಂಜುನಾಥನ ಆಯೋಜಕತ್ವದಲ್ಲಿ ನಡೆದ ಕೋಟಳಮ್ಮ ಜಾತ್ರಾ ಮಹೋತ್ಸವಕ್ಕೆ ಸುಬ್ರಾಯ ಮೂಕಜ್ಜಿಯನ್ನು ಕರೆತಂದುದಾದರೂ ಆಕೆ ಅದೇ ಊರಿನ ತಿಪ್ಪಜ್ಜಿಯ ಮನೆಗೆ ಹೋಗುತ್ತಾಳೆ. ಈ ಹಿಂದೆ ಸುಬ್ರಾಯ ಕುರುಡಿ ತಿಪ್ಪಜ್ಜಿಯ ಮೂಲಕ ತನ್ನ ಅಜ್ಜಿ ಒಮ್ಮೆ, ಸಣ್ಣ ಪ್ರಾಯದಲ್ಲಿರುವಾಗ ಜಾತ್ರೆಗೆಂದು ಬಂದು, ಅಮ್ಮನ ಆವಾಹನೆ ಆಗಿದ್ದರಿಂದ ಬಟ್ಟೆಯನ್ನು ಕಳಚಿ ನಗ್ನವಾದುದರ ಬಗ್ಗೆ ತಿಳಿಯುತ್ತಾನೆ. ನಾಟಕದಲ್ಲಾಗುವ ಪರಕಾಯಾ ಪ್ರವೇಶದಂತೆ ಮೂಕಜ್ಜಿ ವರ್ತಿಸಿದ್ದು ಈ ಬಾರಿ ಸುಬ್ರಾಯ ತನ್ನ ಅಜ್ಜಿಯ ನಡಾವಳಿಯ ಬಗ್ಗೆ ಎಚ್ಚರದಿಂದಿದ್ದ.

**ಮೂಕಜ್ಜಿಯ ಕನಸುಗಳು: ಡಾ.ಕೆ.ಶಿವರಾಮ ಕಾರಂತ ಪುಟ 123 (52ನೇ ಮುದ್ರಣ 2023)**

ಕೋಟಳಮ್ಮ ದೇವಿಯ ರೋಚಕ ಕಥೆ, ಹಾಗೂ ಅವಳ ಜಾತ್ರಾ ಮಹೋತ್ಸವದ ನಂತರ ವಿಚಿತ್ರ ತಿರುವಿನಂತೆ ಜೋರಾದ ಮಳೆ ಹೊಯ್ದು ದೇವಸ್ಥಾನದ ಮಂಟಪವೇ ಉರುಳಿಹೋಗುವಂತಾಗುತ್ತದೆ. ಇದರ ಮಧ್ಯೆ ಸುಬ್ರಾಯ ತನ್ನ ಸಂಶೋಧನೆಯ ಗೀಳನ್ನು ಬಿಡದೆ ಗೋವಿಂದನನ್ನು ಕರೆದುಕೊಂಡು ಬಾವಿಯ ಶೋಧನೆಯಲ್ಲಿ ತೊಡಗಿದಾಗ ಸುಬ್ರಾಯನಿಗೆ ಗತಕಾಲದ ಅನೇಕ ಸತ್ಯಗಳ ಸಾಕ್ಷಿ ಪುರಾವೆಗಳು ಸಿಗುವಂತಾಗುತ್ತದೆ. ಅವನ್ನೆಲ್ಲಾ ತನ್ನ ಅಜ್ಜಿಯ ಕೈಗೆ ಕೊಟ್ಟು ಭೂತಕಾಲದ ಸಂಗತಿಗಳನ್ನು ತಿಳಿದುಕೊಳ್ಳುವ ಕುತೂಹಲ ಸುಬ್ರಾಯನದ್ದು.

ಇದಕ್ಕೆಲ್ಲಾ ವ್ಯತಿರಿಕ್ತದಂತೆ ಶಾಸ್ತ್ರ ಸಂಪ್ರದಾಯಗಳ ರೂವಾರಿಯಂತಿದ್ದ ಅನಂತರಾಯರು ಮನೆಗೆ ಬಂದು ಅಜ್ಜಿ ಮೊಮ್ಮಗನ ಪ್ರಾಚ್ಯ ಸಂಶೋಧನಾ ವಿಚಾರಗಳ ವಿರುದ್ಧವಾಗಿ ಮಾತಾಡುತ್ತಾನೆ. ಆಗ ಮೂಕಜ್ಜಿ ಅವನ ನಿಜವಾದ ಬಂಡವಾಳವನ್ನು ಬಯಲಿಗೆಳೆಯುವ ಮೂಲಕ ಆತನ ಗೋಸುಂಬೆತನವನ್ನು ತಿಳಿಸುತ್ತಾಳೆ." ನಂಬಿದ್ದನ್ನು ತಿಳಿದುಕೊಂಡು ಅದರಂತೆ ಬಾಳುವಂಥ ಬುದ್ಧಿ ಇರಬೇಕು. ನಿನಗೆ ಹೆಣ್ಣು ಅಸಹ್ಯ ಅಂತ ಕಾಣಿಸಬಹುದು. ಅದು ಬೇಡವಾದರೆ ಬಿಡು. ಆದರೆ, ಹೆಣ್ಣಿನೊಡನೆ ಆಡುವ ಆಟವನ್ನು ಗಂಡಿನೊಡನೆ ಆಡುವವರಿಗೆ ಅಷ್ಟೆಲ್ಲ ಅಧಿಕ ಪ್ರಸಂಗ ಯಾತಕ್ಕೆ- ಅಂತ ಕಾಣಿಸುತ್ತದೆ ನನಗೆ" [8]- ಈ ಮಾತುಗಳು ಮೂಕಜ್ಜಿಯ ಸೂಕ್ಷ್ಮ ಗ್ರಾಹಿತ್ವವನ್ನು ಎತ್ತಿ ಹಿಡಿಯುತ್ತದೆ.

**ವಿಷಯದ ಫಲಿತತೆ**

ಹೀಗೆ ಅನೇಕ ಸಂದರ್ಭಗಳಲ್ಲಿ ಮೂಕಜ್ಜಿಯ ಸ್ವಭಾವ 'ಇದ್ದದ್ದನ್ನು ಇದ್ದ ಹಾಗೇ ಹೇಳುವ' ನೇರ, ದಿಟ್ಟ ಮಹಿಳೆಯಾಗಿ ಚಿತ್ರಿತವಾಗಿದೆ. ಕಾದಂಬರಿಯನ್ನು ಆಧರಿಸಿ ಅನೇಕ ರಂಗ ತಂಡಗಳು ರಂಗರೂಪವನ್ನು ಪ್ರದರ್ಶಿಸಿದ್ದಾರೆ. ಹಾಗೆಯೇ ಪಿ.ಶೇಷಾದ್ರಿಯವರು ಕಾದಂಬರಿಯನ್ನು ಇದೇ ಹೆಸರಿನ ಚಲನಚಿತ್ರವೊಂದನ್ನೂ ನಿರ್ದೇಶಿಸಿದ್ದಾರೆ. ಒಂದು ಕಾದಂಬರಿ ನಾಟಕ ಹಾಗೂ ಸಿನಿಮಾ ಮಾಧ್ಯಮವಾಗಿ ಜನಮನವನ್ನು ತಲುಪಬೇಕಾದರೆ ಖಂಡಿತಾ ಅದರಲ್ಲಿ ನಾಟಕೀಯ ತಿರುವುಗಳು ಅಂತರ್ಗತವಾಗಿರಲೇ ಬೇಕಾಗುತ್ತದೆ.

**ಮೂಕಜ್ಜಿಯ ಕನಸುಗಳು:** ಡಾ.ಕೆ.ಶಿವರಾಮ ಕಾರಂತ ಪುಟ 272 (52ನೇ ಮುದ್ರಣ 2023)

**ಪರಾಮರ್ಶನ ಗ್ರಂಥ**

1) ಮೂಕಜ್ಜಿಯ ಕನಸುಗಳು: ಡಾ.ಕೆ.ಶಿವರಾಮ ಕಾರಂತ (52ನೇ ಮುದ್ರಣ 2023), ಪ್ರಕಾಶಕರು: ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್.
2) ಶಿವರಾಮ ಕಾರಂತ; ಮೊಳೆಯಾರವಿ.ಬಿ.(ಸಂ): ಕಾರಂತ ಚಿಂತನ, (1991)
3) ತಾರಮಂಗಲಂ ಜೆ**,** ಚತುಕುಲಂ ಜೆ. ಎಂಎನ್ ಶ್ರೀನಿವಾಸ್ ಅವರ ಪರಂಪರೆಯನ್ನು ಮರುಪರಿಶೀಲಿಸುವುದು. ಸಮಾಜಶಾಸ್ತ್ರೀಯ ಕಲ್ಪನೆ. 2018;7:1427.
4) ಉಮ್ಮನ್ ಟಿಕೆ ಕ್ಷೇತ್ರ**,** ವಿಧಾನ ಮತ್ತು ಪರಿಕಲ್ಪನೆಯ ನಡುವಿನ ವ್ಯತ್ಯಾಸಗಳು: ಎಂಎನ್ ಶ್ರೀನಿವಾಸ್ ಅವರ ಮೌಲ್ಯಮಾಪನ. ಸಮಾಜಶಾಸ್ತ್ರೀಯ ಬುಲೆಟಿನ್. 2008 ಜನವರಿ**;**57(1):60-81.
5) ಜಯರಾಮ್ ಎನ್. ಸಮಾಜಶಾಸ್ತ್ರೀಯ ಕಲ್ಪನೆ ಮತ್ತು ಸಾಹಿತ್ಯ ಸಂವೇದನೆ: ಎಂಎನ್ ಶ್ರೀನಿವಾಸ್ ಅವರಿಗೆ ಗೌರವ. ಸಮಾಜಶಾಸ್ತ್ರೀಯ ಬುಲೆಟಿನ್. 2019 ಆಗಸ್ಟ್;68(2):133-53.